ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 48, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) **PM-USHA (MERU)**

# 52ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಸಭೆ ಹಾಗೂ 2026ನೇ ಸಾಲಿನ 1ನೇ ಸಭೆಯ ನಡಾವಳಿಗಳು

ದಿನಾಂಕ : ಶನಿವಾರ, 28-03-2026

ಸಮಯ : ಪೂರ್ವಾಹ್ನ 11 : 00 ಘಂಟೆ

ಸ್ಥಳ : ಕುವೆಂಪು ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **ವಿದ್ಯಾವಿಷಯಕ್ ಪರಿಷತ್ತಿನ 52ನೇ ಸಾಮಾನ್ಯ ಸಭೆಯ ಹಾಗೂ 2026ನೇ** ಸಾಲಿನ 1ನೇ ಸಭೆಯು ದಿನಾಂಕ **28 ಮಾರ್ಚ್ 2026** ರಂದು **ಪೂರ್ವಾಹ್ನ 11.00** ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಡಾ. ತಳವಾರ್ ಸಾಬಣ್ಣ, ವಿಧಾನ ಪರಿಷತ್ತಿನ ಶಾಸಕರು | ಸದಸ್ಯರು |
| 3. | ಶ್ರೀ ಶಿವಕುಮಾರ ವ್ಹಿ. ಪರಾಂಡೆ | ಸದಸ್ಯರು |
| 4. | ಶ್ರೀ ಆರ್. ಎಂ. ದೇವರೆಡ್ಡಿ | ಸದಸ್ಯರು |
| 5. | ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 6. | ಶ್ರೀ ಎಸ್. ಎ. ದೇಶಮುಖ | ಸದಸ್ಯರು |
| 7. | ಶ್ರೀ ವಿಲಾಸ ಎನ್ ಕಾಂಬಳೆ | ಸದಸ್ಯರು |
| 8. | ಪ್ರೊ. ಎಸ್. ಎಂ. ಸಜ್ಜನ | ಸದಸ್ಯರು |
| 9. | ಶ್ರೀಮತಿ ಎಸ್. ಬಿ. ಢಂಗ | ಸದಸ್ಯರು |
| 10. | ಶ್ರೀ ಲಕ್ಷ್ಮಣ ಎಸ್ ಬಡಿಗೇರ | ಸದಸ್ಯರು |
| 11. | ಡಾ. ನೀಲಪ್ಪ ಹೊಸಮನಿ | ಸದಸ್ಯರು |
| 12. | ಡಾ. ಎಂ. ಮಹೇಶ | ಸದಸ್ಯರು |
| 13. | ಪ್ರೊ. ಆರ್. ಎನ್. ಮನಗೂಳಿ | ಸದಸ್ಯರು |
| 14. | ಪ್ರೊ. ಅಶೋಕ ಡಿ' ಸೋಜಾ | ಸದಸ್ಯರು |
| 15. | ಪ್ರೊ. ಶಿವಾನಂದ ಗೋರನಾಳೆ | ಸದಸ್ಯರು |
| 16. | ಪ್ರೊ. ಬಿ. ಎಸ್. ನಾವಿ | ಸದಸ್ಯರು |
| 17. | ಪ್ರೊ. ಜೆ. ಮಂಜಣ್ಣ | ಸದಸ್ಯರು |
| 18. | ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 19. | ಡಾ. ಸುಷ್ಮಾ.ಆರ್. | ಸದಸ್ಯರು |
| 20. | ಡಾ. ಎಸ್ ಸಿ. ಪಾಟೀಲ್ | ಸದಸ್ಯರು |
| 21. | ಪ್ರೊ. ಸಿ. ಎನ್. ವಾಘಮಾರೆ | ಸದಸ್ಯರು |
| 22. | ಪ್ರೊ. ವಿಶ್ವನಾಥ ಅವಟಿ, | ಸದಸ್ಯರು |
| 23. | ಪ್ರೊ. ವಿಶ್ವನಾಥ ಅವಟಿ, **(ನಿರ್ದೇಶಕರು, (ಯೋ.ಮೇ.ಮೌ ಮಂಡಳಿ)** | ಸದಸ್ಯರು |
| 24. | ಪ್ರೊ. ಜೆ. ಮಂಜಣ್ಣ **(ನಿರ್ದೇಶಕರು, ಸಿ.ಡಿ.ಸಿ. ವಿಭಾಗ)** | ಸದಸ್ಯರು |
| 25. | ಪ್ರೊ. ವಾಯ್. ಎಸ್. ಬಲವಂತಗೋಳ **(ವಿದ್ಯಾರ್ಥಿ ಕಲ್ಯಾಣ)** | ಸದಸ್ಯರು |
| 26. | ಶ್ರೀಮತಿ ಸಪ್ನ ಎಂ.ಎ. **(ಹಣಕಾಸು ಅಧಿಕಾರಿಗಳು)** | ಸದಸ್ಯರು |
| 27. | ಪ್ರೊ. ಡಿ. ಎನ್. ಪಾಟೀಲ್, **ಕುಲಸಚಿವರು(ಮೌಲ್ಯಮಾಪನ)** | ಸದಸ್ಯರು |
| 28. | ಶ್ರೀ ಸಂತೋಷ ಕಾಮಗೌಡ ಕೆ.ಎ.ಎಸ್. | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು

| | | |
|---|---|---|
| 1. | ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ | ಸದಸ್ಯರು |
| 3. | ಶ್ರೀ ಗಣೇಶ ಪ್ರಕಾಶ ಹುಕ್ಕೇರಿ, ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 4. | ಶ್ರೀ ಬಿ.ಬಿ. ಚಿಮ್ಮನಕಟ್ಟಿ, ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 5. | ಶ್ರೀ ಅಶೋಕ ಮಲ್ಲಪ್ಪ ಮನಗೂಳಿ, ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 6. | ಶ್ರೀ. ಪ್ರದೀಪ ಶೆಟ್ಟರ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು | ಸದಸ್ಯರು |

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–48, ಬೆಳಗಾವಿ–591156

**ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು**

**ವಿಷಯ:** ದಿನಾಂಕ: 28.03.2026 ರಂದು ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿಯಲ್ಲಿ ಜರುಗಿದ 52ನೇ ಹಾಗೂ 2026 ನೇ ಸಾಲಿನ 1ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿನಾಂಕ: 04.03.2026.

3. ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 04.03.2026.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ (30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 52ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯನ್ನು ದಿನಾಂಕ: 28.03.2026 ರಂದು ಪೂರ್ವಾಹ್ನ 11.00 ಘಂಟೆಗೆ ಕುವೆಂಪು ಸಭಾಂಗಣ, ರಾಚವಿ, ಬೆಳಗಾವಿ ಇಲ್ಲಿ ಆಯೋಜನೆ ಮಾಡಲಾಗಿತ್ತು. ಹೊಸದಾಗಿ ಡೀನರಾಗಿ ನೇಮಕಗೊಂಡಿರುವ ಡಾ. ಎಸ್. ಸಿ. ಪಾಟೀಲ್ ಹಿರಿಯ ಪ್ರಾಧ್ಯಾಪಕರು, ಎಂ.ಬಿ.ಎ ವಿಭಾಗ ಇವರಿಗೆ ಹೂಗುಚ್ಛವನ್ನು ನೀಡುವುದರ ಮೂಲಕ ಸಭೆಗೆ ಬರಮಾಡಿಕೊಳ್ಳಲಾಯಿತು. ತದನಂತರ ಕುಲಸಚಿವರು ಸಭೆಗೆ ಆಗಮಿಸಿದ ವಿಧಾನ ಪರಿಷತ್ ಸದಸ್ಯರಾದ ಪ್ರೊ ಸಾಬಣ್ಣ ತಳವಾರ, ಸಭೆಯ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಇತ್ತೀಚಿಗೆ ಘನತೆವೆತ್ತ ರಾಜ್ಯಪಾಲರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದ ಕುಲಪತಿಗಳನ್ನು ಒಳಗೊಂಡು ಬೆಂಗಳೂರಿನಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುತ್ತಿರುವ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿರುವ ಬಗ್ಗೆ ಹಾಗೂ ಆಧುನಿಕ ತಂತ್ರಜ್ಞಾನ ಸಮಯದಲ್ಲಿ ಅಗತ್ಯಕ್ಕೆ ತಕ್ಕಂತೆ ಶಿಕ್ಷಣವನ್ನು ಒದಗಿಸಲು ಗಮನ ಹರಿಸುವುದು, ಪರೀಕ್ಷಾ ಪದ್ಧತಿಯಲ್ಲಿ ಸಮಗ್ರವಾಗಿ ಬದಲಾವಣೆ ತಂದು ವಿದ್ಯಾರ್ಥಿಗಳು ಯು.ಪಿ.ಎಸ್.ಸಿ /ಕೆ.ಪಿ.ಎಸ್.ಸಿ. ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಲು ಸಹಕಾರಿಯಾಗಲು ತಿಳಿಸಿರುತ್ತಾರೆ. ಕಾರಣ, ತುರ್ತಾಗಿ ವಿಶ್ವವಿದ್ಯಾಲಯವು ವಿದ್ಯಾವಿಷಯಕ್ ಪರಿಷತ್ ಮೂಲಕ ಶೈಕ್ಷಣಿಕ ಗುಣಮಟ್ಟ, ಪರೀಕ್ಷಾ ಸುಧಾರಣೆ, ಕೌಶಲ್ಯ ಅಭಿವೃದ್ಧಿಗಳಿಗೆ ಹೆಚ್ಚಿನ ಒತ್ತು ನೀಡಲು ಅಭಿಪ್ರಾಯಿಸಿದರು. ತಂತ್ರಜ್ಞಾನ ಅಳವಡಿಕೆಗೆ, ಬೇಡಿಕೆಗೆ ಅನುಗುಣವಾಗಿ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ನ್ಯಾಕ್‌ನಲ್ಲಿ ಮೇಲ್ದರ್ಜೆ ಅಂಕವನ್ನು ಪಡೆಯಬೇಕಾದ ಅವಶ್ಯಕತೆಯನ್ನು ಮನವರಿಕೆ ಮಾಡಿದರು.

ಹೀರೇಬಾಗೇವಾಡಿ ಗ್ರಾಮದಲ್ಲಿ ನೂತನ ಕಟ್ಟಡ ಕಾಮಗಾರಿಯು ಅಂತಿಮ ಹಂತದಲ್ಲಿ ತಲುಪಿದ್ದು ಜುಲೈ ತಿಂಗಳಲ್ಲಿ ವಿಜ್ಞಾನ ಸಂಬಂಧಿತ ವಿಭಾಗಗಳನ್ನು ಸ್ಥಳಾಂತರಿಸಲಾಗುವುದು ಹಾಗೂ ಭೂತರಾಮನಹಟ್ಟಿಯ 72 ಎಕರೆ ಜಮೀನನ್ನು ವಿಶ್ವವಿದ್ಯಾಲಯಕ್ಕೆ ಉಳಿಸಿಕೊಳ್ಳುವ ಪ್ರಕ್ರಿಯೆಯು ಕೂಡ ಚಾಲ್ತಿಯಲ್ಲಿರುತ್ತದೆ ಎಂಬ ಮಾಹಿತಿಯನ್ನು ಕುಲಪತಿಗಳು ಸಭೆಗೆ ನೀಡಿದರು. ವಿಧಾನ ಪರಿಷತ್ ಸದಸ್ಯರಾದ ಪ್ರೊ. ಸಾಬಣ್ಣ ತಳವಾರ ಇವರು ಸತತ 6 ವರ್ಷಗಳ ಅವಧಿಯವರೆ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕೀರ್ತಿ ಹೆಚ್ಚಿಸಿದಕ್ಕೆ ಮಾನ್ಯರಿಗೆ ಅಭಿನಂದನೆ ಸಲ್ಲಿಸಿದರು. ಏಪ್ರಿಲ್ 14 ರಂದು ಡಾ. ಬಾಬಾಸಾಹೇಬ ಅಂಬೇಡ್ಕರ ಜನ್ಮದಿನದ ಪ್ರಯುಕ್ತ "ಮನೆ-ಮನೆಗೆ ಮನ-ಮನಕ್ಕೆ ಡಾ. ಬಾಬಾಸಾಹೇಬರು" ಎಂಬ ಪುಸ್ತಕವನ್ನು ಬಿಡುಗಡೆ ಮಾಡುತ್ತಿದ್ದು ಇದು ಎಲ್ಲ ವಿದ್ಯಾರ್ಥಿಗಳಿಗೆ ತಲುಪಬೇಕು ಎಂದರು.

ಸದಸ್ಯರಾದ ಪ್ರೊ. ಸಾಬಣ್ಣ ತಳವಾರ ಇವರು ಮಾತನಾಡಿ, ವಿಧಾನ ಪರಿಷತ್‌ನಲ್ಲಿ ವಿಶ್ವವಿದ್ಯಾಲಯಗಳು ನೀಡುತ್ತಿರುವ ಶಿಕ್ಷಣದ ಸ್ಥಿತಿಗತಿ ಕುರಿತಾಗಿ ಚರ್ಚಿಸಿದ್ದು ಬಹುತೇಕ ವಿಶ್ವವಿದ್ಯಾಲಯಗಳು "ಅನುತ್ಪಾದಕ ಪದವೀಧರರು" (Unproductive Graduates) ರನ್ನು ಸಮಾಜಕ್ಕೆ ನೀಡುತ್ತಿವೆ. ಅತ್ಯುನ್ನತವಾದ ಸ್ಥಾನದಲ್ಲಿರುವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡಿ ಸಮಾಜದ ಹೊಣೆಗಾರಿಗೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕಾದ ಅವಶ್ಯಕತೆ ಮತ್ತು ಕೇಂದ್ರಿಕೃತವಾದ ಶಿಕ್ಷಣವನ್ನು ನೀಡುವ ಬದಲಾಗಿ ವಿಕೇಂದ್ರಿಕೃತ ಶಿಕ್ಷಣಕ್ಕೆ ಆದ್ಯತೆ ನೀಡಬೇಕೆಂಬ ವಿಚಾರ ವ್ಯಕ್ತಪಡಿಸಿದರು.

ತದನಂತರ ಕುಲಸಚಿವರು ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.

| ಕ್ರ. ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2026/03/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯಲ್ಲಿ ಮಂಡಿಸುವುದು. |
| | **ತೀರ್ಮಾನ** | **ದಿನಾಂಕ: 06.06.2025 ರಂದು ನಡೆದ ವಿದ್ಯಾವಿಷಯಕ್ ಪರಿಷತ್ತಿನ ಸಾಮಾನ್ಯ ಸಭೆ ಹಾಗೂ ದಿನಾಂಕ: 08.08.2025 ಮತ್ತು 24.11.2025 ರಂದು ನಡೆದ ವಿದ್ಯಾವಿಷಯಕ್ ಪರಿಷತ್ತಿನ ವಿಶೇಷ ಸಭೆಗಳ ಗೊತ್ತುವಳಿಗಳ ಅನುಪಾಲನಾ ವರದಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.** |
| 02 | 2026/03/02 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಸ್ನಾತಕ ಬಿ.ಎ. ಮತ್ತು ಬಿ.ಎಸ್ಸಿ ತರಗತಿಗಳಲ್ಲಿ DSC ಮಾನವಶಾಸ್ತ್ರ ವಿಷಯವನ್ನು ಪ್ರಾರಂಭಿಸುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಸ್ನಾತಕ ಬಿ.ಎ. ಮತ್ತು ಬಿ.ಎಸ್ಸಿ ತರಗತಿಗಳಲ್ಲಿ ಮಾನವಶಾಸ್ತ್ರವನ್ನು DSC ವಿಷಯವನ್ನಾಗಿ ಬೋಧಿಸಲು ವಿಭಾಗವನ್ನು ತೆರೆಯಲು ಸಿಂಡಿಕೇಟ್ ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು ಸಲ್ಲಿಸಿರುವ ಮನವಿಯನ್ನು ಸಭೆಯ ಗಮನಕ್ಕೆ ತರಲಾಯಿತು.**<br>**ಚರ್ಚಿಸಿದ ಸಭೆಯು, 2026-27 ನೇ ಶೈಕ್ಷಣಿಕ ವರ್ಷದಿಂದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಸ್ನಾತಕ ಬಿ.ಎ. ಮತ್ತು ಬಿ.ಎಸ್ಸಿ ತರಗತಿಗಳಲ್ಲಿ ಮಾನವಶಾಸ್ತ್ರವನ್ನು DSC ವಿಷಯವನ್ನಾಗಿ ಬೋಧಿಸಲು ಸಮಾಜಶಾಸ್ತ್ರ ವಿಭಾಗದ ಬಿ.ಓ.ಎಸ್ ಸಮಿತಿಯ ಅಭಿಪ್ರಾಯಕ್ಕೆ ಪತ್ರ ಬರೆಯುವುದು ಹಾಗೂ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ತೀರ್ಮಾನಿಸಿತು.** |
| 03 | 2026/03/03 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಉರ್ದು ಮತ್ತು ಹಿಂದಿ ವಿಷಯವನ್ನು ಪ್ರಾರಂಭಿಸುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಉರ್ದು ಮತ್ತು ಹಿಂದಿ ವಿಷಯವನ್ನು ಪ್ರಾರಂಭಿಸಲು ಸಿಂಡಿಕೇಟ್ ಸದಸ್ಯರಾದ ರಫೀ ಭಂಡಾರಿ ಇವರು ಮನವಿಯನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ, ದಿನಾಂಕ: 08.07.2025 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ ಸಭೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ** |

| | | |
|---|---|---|
| | | **ಸಲ್ಲಿಸಲು ಸಭೆಯು ತೀರ್ಮಾನಿಸಿತ್ತು. ಸದರಿ ವಿಷಯವನ್ನು ವಿದ್ಯಾವಿಷಯಕ್ ಪರಿಷತ್ ಸಭೆಗೆ ಮಂಡಿಸಲಾಯಿತು.**<br>**ಚರ್ಚಿಸಿದ ಸಭೆಯು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಉರ್ದು ಮತ್ತು ಮರಾಠಿ ವಿಷಯವನ್ನು ಬೇಸಿಕ್ ಆಗಿ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.**<br>**ಮುಂದುವರೆದು, ಕೆಲವು ಸದಸ್ಯರು ರಾಷ್ಟ್ರೀಯ ಭಾಷೆ ಹಿಂದಿಗೆ ಹೆಚ್ಚಿನ ಬೇಡಿಕೆ ಇರುತ್ತದೆ ಎಂದು ಸಲಹೆ ನೀಡಿದ ಹಿನ್ನೆಲೆಯಲ್ಲಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಹಿಂದಿ ವಿಭಾಗವನ್ನು ಆರಂಭಿಸಲು ಸಭೆಯು ತೀರ್ಮಾನಿಸಿ, ವಿಭಾಗ ಪ್ರಾರಂಭಿಸಲು ಅವಶ್ಯಕ ತಯಾರಿ ಮಾಡಿಕೊಂಡು ಸರ್ಕಾರದ ಅನುಮತಿ ಪಡೆಯಲು ಶಾಸನಗಳನ್ನು ರಚಿಸಿಕೊಂಡು ಮುಂದುವರೆಯಲು ಸರ್ವಾಮತದಿಂದ ಸಭೆಯು ಒಪ್ಪಿತು.** |
| 04 | 2026/03/04 | ಮಹರ್ಷಿ ಸಂದೀಪನಿ ರಾಷ್ಟ್ರೀಯ ವೇದ ಸಂಸ್ಕತ ಶಿಕ್ಷಾಮಂಡಳಿ ನಡೆಸುವ 12ನೇ ತರಗತಿಗೆ ಸಮಾನವಾದ ವೇದವಿಭೂಷಣ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸಗಳಿಗೆ ಸೇರಲು ಅರ್ಹತೆ ನೀಡುವಂತೆ ಕೋರಿರುವ ಕುರಿತು. |
| | ತೀರ್ಮಾನ | **ಭಾರತ ಸರ್ಕಾರ ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ, ಶಾಸ್ತ್ರಿ ಭವನ, ನವದೆಹಲಿ ಇವರ ಪತ್ರದಲ್ಲಿ ಉಜ್ಜಯನಿಯಲ್ಲಿರುವ ಮಹರ್ಷಿ ಸಂದೀಪನಿ ರಾಷ್ಟ್ರೀಯ ವೇದ ಸಂಸ್ಕೃತಿ ಶಿಕ್ಷಾಮಂಡಳಿ ನಡೆಸುವ 12ನೇ ತರಗತಿಗೆ ಸಮಾನವಾದ ವೇದವಿಭೂಷಣ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸಗಳಿಗೆ ಸೇರಲು ಅರ್ಹತೆ ನೀಡುವಂತೆ ಕೋರಿರುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಗೆ ಮಂಡಿಸಲಾಯಿತು. ಚರ್ಚಿಸಿದ ಸಭೆಯು, ಸದರಿ ವಿದ್ಯಾರ್ಥಿಗಳ ಪ್ರಮಾಣಗಳನ್ನು "Equivalence Committee" ಯ ಅಭಿಪ್ರಾಯಕ್ಕಾಗಿ ಸಲ್ಲಿಸುವುದು ಹಾಗೂ ಸಮಿತಿಯ ಅಭಿಪ್ರಾಯದ ಮೇರೆಗೆ ಉಜ್ಜಯನಿಯಲ್ಲಿರುವ ಮಹರ್ಷಿ ಸಂದೀಪನಿ ರಾಷ್ಟ್ರೀಯ ವೇದ ಸಂಸ್ಕೃತಿ ಶಿಕ್ಷಾಮಂಡಳಿ ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ, ನೀಡಲು ಸಭೆಯು ತೀರ್ಮಾನಿಸಿತು.** |
| 05 | 2026/03/05 | 2026-27ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಪ್ರಾರಂಭಿಸುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ, ವಿಜಯಪುರ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯಗಳಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಪ್ರಾರಂಭಿಸಲು ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದ ಈ ಕೆಳಕಾಣಿಸಿದಂತೆ ಕಾರ್ಯ ಚಟುವಟಿಕೆಗಳನ್ನು ಸಿದ್ದಪಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.** |

| ಕ್ರ.ಸಂ | ವಿವಿಧ ಕಾರ್ಯಗಳು |
|---|---|
| 01 | ಶೈಕ್ಷಣಿಕ ವೇಳಾಪಟ್ಟಿ ಸಿದ್ದಪಡಿಸುವುದು |
| 02 | ಪ್ರವೇಶಾತಿ ಶುಲ್ಕ 1,3,5 ಸೆಮಿಸ್ಟರ್‌ಗಳ ಶುಲ್ಕ ವಿವರ ಸಿದ್ದಪಡಿಸುವುದು. |
| 03 | ಪ್ರವೇಶಾತಿ ನಿಯಮಾವಳಿಗಳನ್ನು ಸಿದ್ದಪಡಿಸುವುದು. |

| | | | |
|---|---|---|---|
| | | 04 | **ಅರ್ಹತಾ ಪ್ರಮಾಣ ಪತ್ರ ನೀಡುವುದು.** |
| | | 05 | **ಒಂದು ಮಹಾವಿದ್ಯಾಲಯದಿಂದ ಇನ್ನೊಂದು ಮಹಾವಿದ್ಯಾಲಯಕ್ಕೆ ವರ್ಗಾವಣೆ** |
| | | 06 | **ಒಂದು ವಿಶ್ವವಿದ್ಯಾಲಯದಿಂದ ಇನ್ನೊಂದು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ** |
| | | 07 | **ಮರು ಪ್ರವೇಶಾತಿಯೊಂದಿಗೆ ಮಹಾವಿದ್ಯಾಲಯ ವರ್ಗಾವಣೆ** |
| | | 08 | **ಮರುಪ್ರವೇಶಾತಿ** |
| | | 09 | **ವಿಷಯ ಬದಲಾವಣೆ** |
| | | 10 | **ಪ್ರವೇಶ ರದ್ದತಿ** |
| | | 11 | **ಇನ್ನಿತರ ಕಾರ್ಯಗಳು** |
| 06 | 2026/03/06 | ಸ್ನಾತಕ ವಿಭಾಗಗಳ ನೂತನ ಪಠ್ಯಕ್ರಮಗಳ(SEP) ಪರಿಷ್ಕೃತ ನಿಯಮಾವಳಿಗಳನ್ನು (Regulations) ಅನುಮೋದಿಸುವ ಕುರಿತು | |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾಗಿರುವ (Regulations) ಉನ್ನತ ಶಿಕ್ಷಣ ಇಲಾಖೆಯವರು ಸೂಚಿಸಿರುವಂತೆ ಪರಿಷ್ಕರಿಸಿದ ನಿಯಮಾವಳಿಗಳನ್ನು ಹಾಗೂ ಕೆಲವು ಪೂರಕ ಅಂಶಗಳನ್ನು ಸೇರಿಸಿ ಅಳವಡಿಸಿಕೊಳ್ಳಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.**<br>**ಮುಂದುವರೆದು, ಹೆಚ್ಚುವರಿಯಾಗಿ ಈ ಕೆಳಕಾಣಿಸಿದಂತೆ ಅಂಶಗಳನ್ನು ಕೂಡ ಸೇರ್ಪಡಿಸಲು ಸಭೆಯು ಸೂಚಿಸಿತು.**<br>**1. AEDP Course Structure ನ್ನು ನೂತನವಾಗಿ ಅಳವಡಿಸುವುದು**<br>**2. Diploma in Commercial Practice ಉತ್ತೀರ್ಣರಾದ ವಿದ್ಯಾರ್ಥಿಗಳು ಬಿ.ಕಾಂ 3 ನೇ ಸೆಮಿಸ್ಟರ್‌ಗೆ Lateral Entry ಪ್ರವೇಶಾತಿ ಕುರಿತು.**<br>**3. Work Book ಗೆ ಸಂಬಂಧಿಸಿದ ಆಂತರಿಕ ಅಂಕಗಳ ಕುರಿತಾಗಿ ನೂತನ ಪಠ್ಯಕಮದಲ್ಲಿ ನಿಯಮಾವಳಿಯಲ್ಲಿ ಸೇರಿಸುವುದು.** | |
| 07 | 2026/03/07 | ಸ್ನಾತಕ ವಿಭಾಗಗಳ P.G. Diploma, P.G. Advance Diploma, Diploma and Certificate Course ಪಠ್ಯಕ್ರಮಗಳ ನಿಯಮಾವಳಿಗಳನ್ನು (Regulations) ಅನುಮೋದಿಸುವ ಕುರಿತು. | |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ U.G & P.G. Diploma, Advanced P.G. Diploma and Certificate Course ಗಳ ಪಠ್ಯಕ್ರಮಗಳ ನಿಯಮಾವಳಿಗಳ (Regulations) ನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು. ವಿವಿಧ ವಿಭಾಗಗಳಿಂದ ಸದರಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಈ ನಿಯಮಾವಳಿಗಳನ್ನು ಪರಿಗಣಿಸಿ ಆಯಾ ಅಧ್ಯಯನ ಮಂಡಳಿಗಳು ಅವಶ್ಯತೆಗನುಗುಣವಾಗಿ ಪ್ರಾಋಂಭಿಸಲು ಅನುಮೋದಿಸಲಾಯಿತು.**<br>**ಮುಂದುವರೆದು, ಭವಿಷ್ಯದಲ್ಲಿ ಯಾವುದೇ ಸಂಸ್ಥೆಯವರು ಮೇಲ್ಕಾಣಿಸಿದ ಕೋರ್ಸಗಳನ್ನು ಪ್ರಾರಂಭಿಸಲು ಇಚ್ಛಿಸಿದಲ್ಲಿ ಸದರಿಯವರಿಗೆ ನಿಯಮಾನುಸಾರ ಅನುಮತಿ ನೀಡಲು ಸಭೆಯು ತೀರ್ಮಾನಿಸಿತು.** | |

| | | |
|---|---|---|
| 08 | 2026/03/08 | ಸ್ನಾತಕ ವಿಭಾಗಗಳ B.Ed ಪಠ್ಯಕ್ರಮಗಳ ಪರಿಷ್ಕೃತ ನಿಯಮಾವಳಿಗಳನ್ನು (Regulations) ಅನುಮೋದಿಸುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ B.Ed ಪಠ್ಯಕ್ರಮಗಳ ಪರಿಷ್ಕೃತ ನಿಯಮಾವಳಿಗಳನ್ನು(Regulations) ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** |
| 09 | 2026/03/09 | ಸ್ನಾತಕ ವಿಭಾಗಗಳ B.Ed ಪಠ್ಯಕ್ರಮವನ್ನು(Syllabus) ಅನುಮೋದಿಸುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2025-26 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾಗಿರುವ B.Ed ಪರಿಷ್ಕೃತ ಪಠ್ಯಕ್ರಮವನ್ನು(Syllabus) ಅನುಮೋದನೆ ನೀಡಿತು.** |
| 10 | 2026/03/10 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ನಡೆಯುತ್ತಿರುವ ಎಂ.ಇಡಿ ಕೋರ್ಸನ ಶುಲ್ಕದಲ್ಲಿ ಶೇ. 15 ರಷ್ಟು ಕಡಿಮೆ ಮಾಡಿರುವ ಬಗ್ಗೆ ಸಭೆಯ ಅನುಸಮರ್ಥನೆ ನೀಡುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಕನ್ನಡ, ಸಮಾಜಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಎಂ.ಸಿ.ಎ. ಕೋರ್ಸಗಳಿಗೆ 2025-26 ನೇ ಸಾಲಿನಲ್ಲಿ ಶೇಕಡಾ. 15 ರಷ್ಟು ಪ್ರವೇಶ ಶುಲ್ಕವನ್ನು ಕಡಿಮೆಗೊಳಿಸುವಂತೆ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ ಅನುಮೋದನೆ ಪಡೆದು ವಿವಿಧ ವಿಭಾಗಗಳಿಗೆ ಕಛೇರಿ ಆದೇಶ ನೀಡಲಾಗಿತ್ತು. ಮುಂದುವರೆದು, ಸ್ನಾತಕೋತ್ತರ ಎಂ.ಇಡಿ ಕೋರ್ಸಗೆ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗಿರುವುದರಿಂದ ಮಾನ್ಯ ಕುಲಪತಿಗಳು ಎಂ.ಇಡಿ. ಕೋರ್ಸಿನ ಶುಲ್ಕದಲ್ಲಿ ಶೇ. 15 ರಷ್ಟು ಕಡಿಮೆ ಮಾಡಲು ಅನುಮೋದನೆ ನೀಡಿರುತ್ತಾರೆ. ಕಾರಣ, ಸದರಿ ವಿಷಯಕ್ಕೆ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಸಮರ್ಥನೆ ನೀಡಿತು.**<br>**ಮುಂದುವರೆದು, ಪ್ರವೇಶಾತಿ ಶುಲ್ಕ ರಿಯಾಯಿತಿಗೆ ಒಂದು ಸಲ ಮಾತ್ರ (One time concession) ಅವಕಾಶ ಕಲ್ಪಿಸುವ ಷರತ್ತು ವಿಧಿಸುವಂತೆ ಸಭೆಯು ಸೂಚಿಸಿತು ಹಾಗೂ ಪ್ರವೇಶಾತಿ ಕಡಿಮೆಯಾಗುತ್ತಿರುವ ವಿಭಾಗಗಳ ಅಧ್ಯಾಪಕರು ಪ್ರವೇಶಾತಿ ಹೆಚ್ಚಿಸಲು ಮಹತ್ವದ ಪಾತ್ರದ ವಹಿಸಲು ಸಭೆಯು ಸೂಚಿಸಿತು.** |
| 11 | 2026/03/11 | ವಿಶ್ವವಿದ್ಯಾಲಯದ ವಿಭಾಗಗಳಲ್ಲಿ Mentor Team ಗಳನ್ನು ನಿಯೋಜಿಸುವ ವಿಷಯದ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಸ್ನಾತಕೋತ್ತರ ವಿಭಾಗಗಳನ್ನು ಸದೃಢಗೊಳಿಸಲು ಪ್ರತಿ ವಿಭಾಗಗಳಲ್ಲಿ Mentor Team ಗಳನ್ನು ನಿಯೋಜಿಸುವುದು ಅವಶ್ಯಕವಾಗಿರುತ್ತದೆ. ಸದರಿ Mentor Team ಗಳಿಗೆ ವಿಶ್ವವಿದ್ಯಾಲಯಗಳ ಆಯಾ ವಿಷಯಗಳ ನಿವೃತ್ತ ಪ್ರಾಧ್ಯಾಪಕರು, ಆಯಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತರಾದ ನಿಪುಣ ವೃತ್ತಿಪರರು ಹಾಗೂ ಖಾಸಗಿ ಕಂಪನಿಗಳಿಂದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿಷಯ ಪರಿಣಿತರನ್ನು ಆಹ್ವಾನಿಸಲು ಹಾಗೂ ಸದರಿಯವರನ್ನು ನಿಯೋಜಿಸಲು ಸಭೆಯು ಅನುಮೋದನೆ ನೀಡಿತು.**<br>**ಮುಂದುವರೆದು, ವಿಭಾಗದ ಮುಖ್ಯಸ್ಥರು ಪರಿಣೀತರ ಪಟ್ಟಿ ಮತ್ತು ಸದರಿಯವರ "Bio-Data" ಸಲ್ಲಿಸಲು ಸಭೆಯು ಸೂಚಿಸಿತು.** |

| | | |
|---|---|---|
| 12 | 2026/03/12 | ವಿಶ್ವವಿದ್ಯಾಲಯದ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ವಿದ್ಯಾವಿಷಯಕ್ ಪರಿಷತ್ತಿನ ಸಭೆಯಲ್ಲಿ ಅನುಮೋದನೆ ನೀಡುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ವಿದ್ಯಾವಿಷಯಕ್ ಪರಿಷತ್ತಿನ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** |
| 13 | 2026/03/13 | 2026-27ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಭೆಗೆ ಅನುಮೋದನೆಗೆ ಸಲ್ಲಿಸುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ವಿದ್ಯಾವಿಷಯಕ್ ಪರಿಷತ್ತಿನ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು** | | |
| 14 | 2026/03/I | SWAYAM(MOOCS) Online Course ಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳುವ ಕುರಿತು |
| | **ತೀರ್ಮಾನ** | **2026-27 ನೇ ಶೈಕ್ಷಣಿಕ ಸಾಲಿನಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪಠ್ಯಕ್ರಮಗಳಲ್ಲಿ SWAYAM (MOOCS) Online Course ಗಳನ್ನು ನೂತನ ಪಠ್ಯಕ್ರಮದಲ್ಲಿ ಅಳವಡಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.**<br>**ಮುಂದುವರೆದು, ವಿಜ್ಞಾನ ವಿಭಾಗದ ಡೀನರು ಮತ್ತು ವಿಶೇಷಾಧಿಕಾರಿಗಳು ಹಾಗೂ SWAYAM(MOOCS) Online Course ನ ಸಂಯೋಜಕರನ್ನು ಒಳಗೊಂಡು ಸಮಿತಿ ರಚಿಸಲು ತೀರ್ಮಾನಿಸಿತು. ಸದರಿ ಸಮಿತಿಯು ವಿವಿಧ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ತಿಳಿಸಿತು ಹಾಗೂ SWAYAM MOOCS ಪಠ್ಯಕ್ರಮವನ್ನು ನಿಯಮಾವಳಿಗಳಲ್ಲಿ ಸೇರಿಸಲು ಸೂಕ್ತ ಕ್ರಮ ವಹಿಸಲು ಸೂಚಿಸಿತು.** |
| 15 | 2026/03/II | ವಿಶ್ವವಿದ್ಯಾಲಯದ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ WorkBook ನ್ನು ಎಲ್ಲಾ ವಿಷಯಗಳಿಗೆ ಕಡ್ಡಾಯಗೊಳಿಸುವ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಬರುವ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಎಲ್ಲ ವಿಷಯಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2026-27 ನೇ ಸಾಲಿನಿಂದ ಕಡ್ಡಾಯವಾಗಿ WorkBook ನ್ನು ಅಳವಡಿಸಲು ಸಭೆಯ ಮಾರ್ಗದರ್ಶನ ಕೋರಲಾಯಿತು.**<br>**1. ಪ್ರೊ .ಜೆ. ಮಂಜಣ್ಣ:-**<br>**WorkBook ನ್ನು ಜಾರಿ ಮಾಡುವುದು ಒಳ್ಳೆಯ ಬೆಳವಣಿಗೆ. ಆದರೆ ಆಂತರಿಕ ಅಂಕಗಳಲ್ಲಿ WorkBookಗೆ ಎಷ್ಟು ಅಂಕಗಳನ್ನು ನಿಗದಿಪಡಿಸಬೇಕೆಂದು ಸ್ಪಷ್ಟತೆ ನೀಡಲು ಕೋರಿದರು.**<br>**ಪ್ರೊ. ವಿಶ್ವನಾಥ ಅವಟಿ:-**<br>**ಈಗಾಗಲೇ ವಿದ್ಯಾರ್ಥಿಗಳಿಗೆ Assignment ನೀಡಲಾಗುತ್ತಿದ್ದು, Assignment ಬದಲಾಗಿ WorkBook ಪದ್ದತಿಯನ್ನು ಜಾರಿಗೊಳಿಸಿ Assignmentಗೆ ನೀಡಲಾಗುತ್ತಿದ್ದ ಅಂಕಗಳನ್ನು WorkBook ಗೆ ನೀಡಬಹುದಾಗಿದೆ ಎಂದರು.** |

| | | |
|---|---|---|
| | | **2. ಪ್ರೊ. ಎಸ್. ಸಿ. ಪಾಟೀಲ್:-**<br>**Work Book Concept ನಲ್ಲಿ Clarity ಇರಬೇಕು. ಶಿಕ್ಷಕರಾಗಿ, ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಕ್ರಿಯಾಶೀಲತೆ ಫಲಿತಾಂಶ ಮೂಡುವಂತೆ ಮಾಡುವ ಉದ್ದೇಶದಿಂದ Work Book ಜಾರಿ ಮಾಡುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದರು.**<br>**3. ಪ್ರೊ. ಅಶೋಕ ಡಿಸೋಜಾ:-**<br>**Work Book ನ್ನು ಜಾರಿಗೊಳಿಸಲು ಸಮ್ಮತಿ ಸೂಚಿಸಿ ತರಗತಿಯ ಒಂದು ಗಂಟೆಯನ್ನು Work Book ಗೆ ಸೀಮಿತಗೊಳಿಸಿ ಬೋಧಕ ಸಿಬ್ಬಂದಿಗಳು ವಿದ್ಯಾರ್ಥಿಗಳ ಕ್ರಿಯಾ ಚಟುವಟಿಕೆ ಕುರಿತು ಖಾತರಿಪಡಿಸಿಕೊಳ್ಳಲು ಬಳಸಿಕೊಳ್ಳಬಹುದಾಗಿದೆ**<br>**4. ಶ್ರೀ ನೀಲಪ್ಪ ಹೊಸಮನಿ:-**<br>**Work Bookನ್ನು ವಿಶ್ವವಿದ್ಯಾಲಯವು ಕಡಿಮೆ ಮೊತ್ತದಲ್ಲಿ ಮುದ್ರಿಸಿ ಪ್ರವೇಶಾತಿ ಶುಲ್ಕದಲ್ಲಿಯೇ Work Book ಶುಲ್ಕವನ್ನು ಸೇರಿಸಲು ಸಲಹೆ ನೀಡಿದರು.**<br>**5. ಶ್ರೀ ಆರ್. ಎಂ. ದೇವರೆಡ್ಡಿ:**<br>**ಈಗಾಗಲೇ ಇಂಗ್ಲೀಷ ವಿಷಯದಲ್ಲಿ work book ಜಾರಿ ಮಾಡಲಾಗಿದ್ದು ಅದು ಚೆನ್ನಾಗಿ ಮೂಡಿ ಬರುತ್ತಿದೆ. ಕಾರಣ, ಎಲ್ಲ ವಿಷಯಗಳಿಗೆ Work Book ಜಾರಿಗೊಳಿಸಲು ತಿಳಿಸಿರುತ್ತಾರೆ.**<br>**ಚರ್ಚಿಸಿದ ಸಭೆಯು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಬರುವ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ವಿಷಯಗಳಿಗೆ work book ನ್ನು ಅಳವಡಿಸಲು ಹಾಗೂ ಕಡ್ಡಾಯವಾಗಿ ಜಾರಿಗೊಳಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.**<br>**ಮುಂದುವರೆದು work book ಗೆ ನಿಗದಿತ ಶುಲ್ಕ ನಿಗದಿಪಡಿಸಿ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಮುದ್ರಿಸಲು ಸಭೆಯು ತೀರ್ಮಾನಿಸಿತು.** |
| 16 | 2026/03/III | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಮರಾಠಿ ವಿಷಯವನ್ನು ಪ್ರಾರಂಭಿಸುವ ಕುರಿತು. |
| | **ತೀರ್ಮಾನ** | **2026-27 ನೇ ಶೈಕ್ಷಣಿಕ ಸಾಲಿನಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಮರಾಠಿ ವಿಷಯವನ್ನು ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.** |
| 17 | 2026/03/IV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ಸ್ನಾತಕೋತ್ತರ ಡಿಪ್ಲೋಮಾ ವಚನ ಅಧ್ಯಯನ ಹಾಗೂ ಭಾಷಾಂತರ ಅಧ್ಯಯನ ಸಂಸ್ಥೆ ಕೋರ್ಸಗಳ ಪತ್ರಿಕೆ 1.5 ಪ್ರೊಜೆಕ್ಟ್ ವರ್ಕನ್ನು ಹೊರತುಪಡಿಸಿ ಪರೀಕ್ಷಾ ಫಲಿಂತಾಶವನ್ನು ಬಿಡುಗಡೆಗೊಳಿಸುವ ವಿಷಯದ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ಸ್ನಾತಕೋತ್ತರ ಡಿಪ್ಲೋಮಾ ವಚನ ಅಧ್ಯಯನ ಹಾಗೂ ಭಾಷಾಂತರ ಅಧ್ಯಯನ ಸಂಸ್ಥೆ ಕೋರ್ಸಗಳ ಪತ್ರಿಕೆ 1.5 ಪ್ರೊಜೆಕ್ಟ್ ವರ್ಕನ್ನು ಹೊರತುಪಡಿಸಿ ಪರೀಕ್ಷಾ** |

| | | |
|---|---|---|
| | | **ಫಲಿಂತಾಶವನ್ನು ಬಿಡುಗಡೆಗೊಳಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಸಮರ್ಥನೆ ನೀಡಿತು.** |
| 18 | 2026/03/V | 2026-27 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿವಿಧ ಕೋರ್ಸ್‌ಗಳ ಪ್ರವೇಶಾತಿ ಸಂಬಂಧಿಸಿದಂತೆ ಶುಲ್ಕ ಹೆಚ್ಚಳ ಕುರಿತು |
| | ತೀರ್ಮಾನ | **2026-27 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿವಿಧ ಕೋರ್ಸ್‌ಗಳಿಗೆ ಹಿಂದಿನ ಸಾಲಿನ ಶುಲ್ಕವನ್ನು ಆಕರಿಸಬೇಕೋ ಅಥವಾ ಪ್ರತಿ ವರ್ಷದಂತೆ 10% ಹೆಚ್ಚುವರಿಯಾಗಿ ಶುಲ್ಕ ಆಕರಣೆ ಮಾಡಿಕೊಳ್ಳುವ ಕುರಿತು ಸಭೆಯ ಮಾರ್ಗದರ್ಶನ ಕೋರಲಾಯಿತು.**<br>**1. ಶ್ರೀ ಆರ್. ಎಂ. ದೇವರೆಡ್ಡಿ:**<br>**ಮುಂದಿನ ಮೂರು ವರ್ಷಗಳವರೆಗೆ ಶುಲ್ಕವನ್ನು ಹೆಚ್ಚಿಸುವುದು ಬೇಡ.ಈಗೀರುವ ಶುಲ್ಕವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸುವುದು. ಇದರಿಂದಾಗಿ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಸಹಾಯಕಾರಿಯಾಗುವುದು ಎಂದು ಮನವಿ ಸಲ್ಲಿಸಿದರು.**<br>**ಚರ್ಚಿಸಿದ ಸಭೆಯು, 2026-27 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿವಿಧ ಕೋರ್ಸ್‌ಗಳಿಗೆ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರಸ್ತುತ ಇರುವ ಶುಲ್ಕಕ್ಕೆ ರೂ. 150/- Non-Profession Course ಗೆ ಮತ್ತು ರೂ. 200/- Profession Course ಗೆ ಹಾಗೂ 5ನೇ ಸೆಮಿಸ್ಟರ್ ಗೆ ಹಿಂದಿನ ಸಾಲಿನ ಶುಲ್ಕಕ್ಕೆ 10% ಪ್ರವೇಶಾತಿ ಶುಲ್ಕವನ್ನು ಹೆಚ್ಚಿಸಲು ಸಭೆಯು ತೀರ್ಮಾನಿಸಿತು.** |
| 19 | 2026/03/VI | ಕಾಲೇಜು ಅಭಿವೃದ್ಧಿ ಪರಿಷತ್ತಿಗೆ ಸಂಬಂಧಿಸಿದ ವಿಷಯಗಳನ್ನು ವಿದ್ಯಾವಿಷಯಕ್ ಸಭೆಗೆ ಮಂಡಿಸುವ ಕುರಿತು. |
| | ತೀರ್ಮಾನ | **1. 2024-25ನೇ ಶೈಕ್ಷಣಿಕ ಸಾಲಿನಲ್ಲಿ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿದ 07 ಮಹಾವಿದ್ಯಾಲಯಗಳಿಗೆ ಸರ್ಕಾರದ ನಿರ್ದೇಶದನ್ವಯ ನೋಟಿಸ್ ಜಾರಿ ಮಾಡಿ, ಅವರಿಂದ ಸ್ಪಷ್ಟೀಕರಣವನ್ನು ಪಡೆಯಲು ಸೂಚಿಸಲಾಗಿತ್ತು. ಅದರನ್ವಯ, ಸಂಬಂಧಿತ ಮಹಾವಿದ್ಯಾಲಯಗಳಿಂದ ಸ್ಥಗಿತಕ್ಕಾಗಿ ಸರ್ಕಾರಕ್ಕೆ ಮತ್ತೊಮ್ಮೆ ಶಿಫಾರಸ್ಸು ಮಾಡಲು ಸಭೆಯು ಅನುಮೋದನೆ ನೀಡಿತು.**<br>**2. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಕೆಲವು ಮಹಾವಿದ್ಯಾಲಯಗಳು ಕಳೆದ 05ಕ್ಕಿಂತ ಹೆಚ್ಚು ವರ್ಷಗಳಿಂದ ಯಾವುದೇ ರೀತಿಯ ಸಂಯೋಜನೆಗಳಿಗೆ ಅರ್ಜಿ ಸಲ್ಲಿಸದೇ ಹಾಗೂ ವಿದ್ಯಾರ್ಥಿ ಪ್ರವೇಶಾತಿಯನ್ನು ಪಡೆಯದೇ ಇರುವುದರಿಂದ, ಅವುಗಳು ಕೇವಲ ಸಂಖ್ಯೆ ದೃಷ್ಠಿಯಿಂದ ಮಾತ್ರ ಅಸ್ತಿತ್ವದಲ್ಲಿರುವಂತಾಗಿದೆ. ಆದ್ದರಿಂದ, ಅಂತಹ ಮಹಾವಿದ್ಯಾಲಯಗಳನ್ನು ನಿಯಮಾನುಸಾರ ಸ್ಥಗಿತಗೊಳಿಸುವ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.**<br>**3. 2026-27 ನೇ ಶೈಕ್ಷಣಿಕ ಸಾಲಿನಲ್ಲಿ NCTE ಯಿಂದ ITEP ಕೋರ್ಸುಗಳಿಗೆ ಅರ್ಜಿ ಸಲ್ಲಿಸಲು ಹಾಗೂ ಸಂಯೋಜನೆ ಪ್ರಕ್ರಿಯೆ ಪೂರ್ಣಗೊಳಿಸಲು ಸಭೆಯು ಅನುಮೋದನೆ ನೀಡಿತು.** |
| 20 | 2026/03/VII | ಸ್ವಾಯತ್ತ ಕಾಲೇಜಿನಲ್ಲಿ ಎಂ.ಎ. ಪತ್ರಿಕೋದ್ಯಮ (Journalism) ಕೋರ್ಸ್‌ಗೆ ಸರ್ಕಾರದ ಕೋಟಾ ಸೀಟುಗಳನ್ನು ಹೆಚ್ಚಿಸುವ ಕುರಿತು ವಿನಂತಿ ಪ್ರವೇಶಾತಿ ವಿಷಯ ಕುರಿತು |

| | | |
|---|---|---|
| | **ತೀರ್ಮಾನ** | **ಎಂ.ಎ. ಪತ್ರಿಕೋದ್ಯಮ (Journalism) ಕೋರ್ಸ್‌ನಲ್ಲಿ 2025-26 ನೇ ಸಾಲಿನಲ್ಲಿ ಒಟ್ಟು 70 ಸೀಟುಗಳಿರುತ್ತವೆ. ಆದರೆ 21 ಸೀಟುಗಳು ಮಾತ್ರ ಪ್ರವೇಶಾತಿ ಆಗಿರುತ್ತವೆ. ಪ್ರಸ್ತುತ ವರ್ಷದಿಂದ ಪ್ರವೇಶಾತಿ ಅರ್ಜಿ ಸಂಖ್ಯೆಗಳನ್ನು ಗಮನಿಸಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅರ್ಜಿ ಸಂಖ್ಯೆ ಕಡಿಮೆ ಇದ್ದು ಬೇರೆ ವಿಶ್ವವಿದ್ಯಾಲಯ ಮತ್ತು ಸ್ವಾಯತ್ತ ಕಾಲೇಜ ಅರ್ಜಿಗಳು ಹೆಚ್ಚಿದ್ದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸೀಟ್‌ಗೆ ಮೀಸಲಿಟ್ಟ 40 ಸೀಟಗಳನ್ನು ಪರಿವರ್ತಿಸಿ ಅಂತಿಮ ಸುತ್ತಿನಲ್ಲಿ ನೀಡಬಹುದೆಂಬ ವಿಶೇಷಾಧಿಕಾರಿಗಳ ಸಲಹೆಯನ್ನು ಸಭೆಯು ಅನುಮೋದಿಸಿತು.** |
| 21 | 2026/03/VIII | PMKVY 4.0 ಯೋಜನೆಯ ಅಡಿಯಲ್ಲಿ ತರಬೇತಿ(Short Term Training-STT) ಯನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿರುವ 25 ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಅನುಷ್ಠಾನಗೊಳಿಸಲು ಅನುಸಮರ್ಥನೆ ನೀಡುವ ಕುರಿತು |
| | **ತೀರ್ಮಾನ** | **PMKVY 4.0 ಯೋಜನೆಯ ಅಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ 25 ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಪ್ರತಿ ಮಹಾವಿದ್ಯಾಲಯದಲ್ಲಿ 120 ಅಭ್ಯರ್ಥಿಗಳಿಗೆ ಅಲ್ಪಾವಧಿಯ ತರಬೇತಿ ನೀಡಲು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಕಾರ್ಯಾದೇಶ ಹೊರಡಿಸಿರುತ್ತಾರೆ.**<br>**ಅದರಂತೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ನಿರ್ದೇಶನ/ಮಾರ್ಗಸೂಚಿಗಳಂತೆ Date Analysis & Web Developer ವಿಷಯಗಳ ತರಬೇತಿ ನೀಡಲು ಪರಿಣಿತರು ವಿಶ್ವವಿದ್ಯಾಲಯ/ಮಹಾವಿದ್ಯಾಲಯಗಳಲ್ಲಿ ಅಲಭ್ಯತೆಯ ಕಾರಣ, ಅರ್ಹ ನೊಂದಾಯಿತ ಸೇವಾ ಪೂರೈಕೆದಾರರಿಂದ ಸೇವೆ ಪಡೆದು ತರಬೇತಿಯನ್ನು ಪ್ರಾರಂಭಿಸುವ ಕುರಿತು ಮಾನ್ಯ ಸರ್ಕಾರ/KSDC ಇವರನ್ನು ಕೋರಲಾಗಿತ್ತು.**<br>**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಇ-ಮೇಲ್ ದಿನಾಂಕ: 06.03.2026 ರಂತೆ ವಿಶ್ವವಿದ್ಯಾಲಯದ ಹಂತದಲ್ಲಿಯೇ ಪ್ರಕ್ರಿಯೆ ಹಾಗೂ ನಿರ್ಣಯವನ್ನು ಕೈಗೊಂಡು STT ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ನಿರ್ದೇಶಿಸಿರುವುದರಿಂದ ವಿಶ್ವವಿದ್ಯಾಲಯದಿಂದ ಸರ್ಕಾರದ ಮಾರ್ಗಸೂಚಿಗಳಂತೆ ಕ್ರಮವಹಿಸಲು ಸಭೆಯು ಅನುಸಮರ್ಥನೆ ನೀಡಿತು.** |
| 22 | 2026/03/XI | "Integrated Course" ಗಳನ್ನು ಆರಂಭಿಸುವ ಕುರಿತು |
| | **ತೀರ್ಮಾನ** | **ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಉತ್ತೀರ್ಣಕ್ಕಾಗಿ ಪಠ್ಯಕ್ರಮ ಒಳಗೊಂಡ "Integrated Course" ಗಳನ್ನು ಆರಂಭಿಸಲು ಸಭೆಯು ಅನುಮೋದನೆ ನೀಡಿತು. ಹಾಗೂ ಪ್ರಸ್ತುತ ಕ್ರೆಡಿಟನಲ್ಲಿ ಯಾವುದೇ ಬದಲಾವಣೆ ತರದೇ ಹೊಸ ವಿಷಯಗಳ ಪಠ್ಯಕ್ರಮವನ್ನು ಅಳವಡಿಸಿ Integrated Degree Course ನ್ನು ಪ್ರಾರಂಭಿಸುವುದು.** |
| 23 | 2026/03/X | **2025-26 ನೇ ಶೈಕ್ಷಣಿಕ ಸಾಲಿನ ಪಿಎಚ್.ಡಿ. ಪ್ರವೇಶಾರ್ಥಿ ಪರೀಕ್ಷೆ(Entrance Exam) ನಡೆಸಲು ಸಿದ್ಧಪಡಿಸುವ ಪ್ರಶ್ನೆ-ಪತ್ರಿಕೆಗಳ ಮಾದರಿಯನ್ನು 1 ಪ್ರಶ್ನೆಗೆ 2 ಅಂಕಗಳಂತೆ ಒಟ್ಟು 50 ಪ್ರಶ್ನೆಗಳಿಗೆ 100 ಅಂಕಗಳನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು. ಮುಂದುವರೆದು, ಸಂಬಂದಿಸಿದ ನಿಯಮಾವಳಿಯನ್ನು ಬದಲಾಯಿಸಲು ಸೂಚಿಸಿತು.** |

| | | |
|---|---|---|
| 24 | 2026/03/XI | **ತೃತೀಯ ಲಿಂಗಿ, ದೇವದಾಸಿಯ ಮಕ್ಕಳು ಹಾಗೂ HIV ಸೋಂಕಿತ ವ್ಯಕ್ತಿಗಳಿಗೆ ಸಮಾಜವು ಕೀಳಾಗಿ ಕಾಣುತ್ತದೆ. ಸಮಾಜದಲ್ಲಿ ಇವರುಗಳ ಕುರಿತು ಇರುವ ಕಳಂಕವನ್ನು ಕಡಿಮೆ ಮಾಡಲು ಹಾಗೂ ಅವರನ್ನು ಸಮಾನವಾಗಿ ಕಾಣುವ ಉದ್ದೇಶದಿಂದ, 2026-27 ನೇ ಶೈಕ್ಷಣಿಕ ವರ್ಷಕ್ಕೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಕಾಲೇಜು, ಬೆಳಗಾವಿ ಇಲ್ಲಿ ಪ್ರವೇಶಾತಿಯಲ್ಲಿ ಅರ್ಜಿ ಸಲ್ಲಿಸುವ ತೃತೀಯ ಲಿಂಗಿ, ದೇವದಾಸಿಯ ಮಕ್ಕಳು ಹಾಗೂ HIV ಸೋಂಕಿತ ವಿದ್ಯಾರ್ಥಿಗಳಿಗೆ ಸ್ನಾತಕ ಕೋರ್ಸಗಳಿಗೆ ಸರ್ಕಾರಕ್ಕೆ ಭರಿಸಬೇಕಾದ ಕೆಲವು ಶಿರ್ಷಿಕೆಗಳ ಶುಲ್ಕಗಳನ್ನು ಅಂದರೆ NSS, Red Cross ಹಾಗೂ ಇತ್ಯಾದಿ ಅತ್ಯಲ್ಪ ಶುಲ್ಕಗಳನ್ನು ಮಾತ್ರ ಭರಿಸಿಕೊಳ್ಳಲು ಸಭೆಯು ತೀರ್ಮಾನಿಸಿತು.** |
| 25 | 2026/03/XII | **ವಿಶ್ವವಿದ್ಯಾಲಯದಲ್ಲಿ ವಿಭಾಗದಿಂದ ಪಿಎಚ್.ಡಿ. ಪ್ರವೇಶ ಪರೀಕ್ಷೆ ನಂತರ ಅರ್ಹ ಅಭ್ಯರ್ಥಿ/ಸಂಶೋಧನಾರ್ಥಿಗಳಿಗೆ ಏರ್ಪಡಿಸುವ ಸಂದರ್ಶನಕ್ಕೆ (Viva- Voce) ವಿಭಾಗದ ನಿಖಾಯದ ಡೀನರನ್ನು Viva- Voce ಬೋರ್ಡ್ ನೇಮಿಸಲು ಸಭೆಯು ತೀರ್ಮಾನಿಸಿತು. ಮುಂದುವರೆದು, ಸಂಬಂಧಿಸಿದ ನಿಯಮಾವಳಿಯನ್ನು ಬದಲಾಯಿಸಲು ಸೂಚಿಸಿತು.** |

ಕೊನೆಯದಾಗಿ ವಿಧಾನ ಪರಿಷತ್ ಸದಸ್ಯರಾದ ಪ್ರೊ. ಸಾಬಣ್ಣ ತಳವಾರ ಇವರ ಸೇವೆಯನ್ನು ಸ್ಮರಿಸಿ ಸನ್ಮಾನಿಸಲಾಯಿತು. ತದನಂತರ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** **ಕುಲಪತಿಗಳು ಹಾಗೂ ಅಧ್ಯಕ್ಷರು**

**ಇವರಿಗೆ,**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರುಗಳಿಗೆ

**ಪ್ರತಿ ಮಾಹಿತಿಗಾಗಿ:** ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.